ಆಗ ಎಲ್ಲ ಮಹಿಳೆಯರ ದೃಷ್ಟಿ ನೆಟ್ಟಿದ್ದು ಅವಳು ಧರಿಸಿದ್ದ ಪೈಠಣಿ ಸೀರೆಯ ಮೇಲೆ ಬಿದ್ದಿದ್ದು.

ಈ ಸೀರೆಯಲ್ಲಿ ಅಂಥದ್ದೇನು ವಿಶೇಷತೆ ಎನಿಸಬಹುದು. ಈ ಸೀರೆಯ ಇತಿಹಾಸ, ಅದರ ಸೌಂದರ್ಯ, ಅದರ ಸೊಬಗು, ಹೊಳೆಯುವ ರೇಷ್ಮೆ ಮತ್ತು ಜರಿದಾರಗಳಿಂದ ನೇಯ್ದ ಮತ್ತು ಆಕರ್ಷಕವಾದ ಲಕ್ಷಣಗಳಿಂದ ಎಂಥವರನ್ನೂ ಹುಬ್ಬೇರಿಸುವಂತೆ ಮಾಡುವುದು ಸಹಜ.

**ಇತಿಹಾಸ**

ಈ ಸೀರೆಗಳ ಆರಂಭಿಕ ಕುರುಹುಗಳು ಕ್ರಿ.ಪೂ. ಎರಡನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಶಾತವಾಹನ ರಾಜವಂಶದ ಆಳ್ವಿಕೆಯಲ್ಲಿ ಕಂಡುಬರುತ್ತವೆ. ಮಹಾರಾಷ್ಟ್ರದ ಗೋದಾವರಿ ನದಿಯ ದಡದಲ್ಲಿರುವ ಪೈಥಾನ್ ನಗರವು ಈ ಅಸಾಧಾರಣ ನೇಯ್ಗೆಯ ಸಂಪ್ರದಾಯದ ಕೇಂದ್ರವಾಗಿದೆ. ಇಲ್ಲಿ ನುರಿತ ಕುಶಲಕರ್ಮಿಗಳು, ತಲೆಮಾರುಗಳಿಂದ ಮಗ್ಗಗಳ ಮೇಲೆ ಸೀರೆಗಳನ್ನು ಸೂಕ್ಷ್ಮವಾಗಿ ಹಾಗೇ ಅಸಾಧಾರಣ ಕಲಾಕೃತಿಯಲ್ಲಿ ನೇಯ್ಗೆ ಮಾಡುತ್ತಾ ಬಂದಿದ್ದಾರೆ. ಇವು ಮರಾಠಾ ಪೇಶ್ವೆಗಳು ಹಾಗೂ ಶ್ರೀಮಂತ ಕುಟುಂಬಗಳ ಅಮೂಲ್ಯ ಆಸ್ತಿಗಳಾಗಿದ್ದವು. ಈ ಕುಟುಂಬಗಳ ಸ್ತ್ರೀಯರು ತಮ್ಮಲ್ಲಿ ನಡೆಯುವ ವಿಶೇಷ ಸಮಾರಂಭಗಳಲ್ಲಿ ಹಾಗೂ ಶುಭ ಕಾರ್ಯಗಳಲ್ಲಿ ಈ ತರಹದ ವಿಶೇಷ ನೇಯ್ಗೆಯ ಸೀರೆಗಳಿಂದ ತಮ್ಮನ್ನು ತಾವು ಅಲಂಕರಿಸಿಕೊಳ್ಳುತ್ತಿದ್ದರು. ಇಂಥವರ ಪೋಷಣೆಯಿಂದ ಪೈಠಣಿ ಸೀರೆಗಳ ಸ್ಥಾನಮಾನ ಮತ್ತಷ್ಟು ಹೆಚ್ಚಿತು. ಇವುಗಳನ್ನು ಭಾರತೀಯ ಸಾಂಸ್ಕೃತಿಕ ಪರಂಪರೆಯ ಒಂದು ಪ್ರಮುಖ ಭಾಗವೆಂಬಂತೆ ನೋಡಲಾಗುತ್ತಿದೆ.

ಈ ತರಹದ ಪೈಠಣಿ ಸೀರೆಗಳನ್ನು ಅತ್ಯಂತ ನುರಿತ ಕುಶಲಕರ್ಮಿಗಳು ಚಿನ್ನ ಮತ್ತು ಬೆಳ್ಳಿಯ ಎಳೆಗಳಿಂದ ರೇಷ್ಮೆ ಬಟ್ಟೆಗಳನ್ನು ನೇಯ್ಗೆ ಮಾಡಿ ತಯಾರಿಸುವುದರಿಂದ ಅದರಲ್ಲಿರುವ ವೈವಿಧ್ಯಮಯ ವಿನ್ಯಾಸಗಳು ಅವರ ಪರಿಶ್ರಮ ಮತ್ತು ಅವರ ಕರಕುಶಲತೆಯ ಮೇಲಿನ ಉತ್ಸಾಹವನ್ನು ತೋರಿಸುತ್ತದೆ.

ಈ ಪೈಠಣಿ ಸೀರೆಗಳನ್ನು ರೇಷ್ಮೆ ಬಟ್ಟೆಗಳಲ್ಲಿ ತಯಾರಿಸಿ ಅದರ ಮೇಲೆ ಜರಿ ಕಸೂತಿ ಮಾಡಲಾಗುತ್ತದೆ. ಈ ಸೀರೆಗಳು ಮಹಾರಾಷ್ಟ್ರದ ಹೆಣ್ಣು ಮಕ್ಕಳ ಮದುವೆ ಉಡುಪಾಗಿದ್ದು, ಇದರಲ್ಲಿಯೇ 6 ಗಜ ಹಾಗೂ 9 ಗಜದ ಸೀರೆಗಳು ದೊರೆಯುತ್ತಿವೆ. ಇದನ್ನು ಕಚ್ಚೆ ತರಹ ಕೂಡ ಧರಿಸಬಹುದಾಗಿದೆ. ಇದರಿಂದ ಮದುಮಗಳಿಗೆ ಒಂದು ವಿಶೇಷ ಲುಕ್ ಸಿಗುತ್ತದೆ.

ಮೊದಲೆಲ್ಲಾ ಬರೀ ಪ್ಲೈನ್ ಪೈಠಣಿ ಸೀರೆಗಳು ದೊರೆಯುತ್ತಿದ್ದು, ಇದೀಗ ಇವುಗಳಲ್ಲಿಯೇ ಜರಿ ವರ್ಕ್ ಕೂಡ ದೊರಕುತ್ತಿವೆ. ಹಾಗೇ ಈ ಪೈಠಣಿ ಸೀರೆಗಳಲ್ಲಿ ಹಲವು ವಿನ್ಯಾಸಗಳಿದ್ದು ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ಕಥೆ ಮತ್ತು ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ಇವುಗಳಲ್ಲಿರುವ ಹೂವಿನ ಮಾದರಿಗಳು ಸೌಂದರ್ಯ, ಫಲವತ್ತತೆ ಮತ್ತು ಸಮೃದ್ಧಿಯನ್ನು ಪ್ರತಿನಿಧಿಸುತ್ತವೆ. ಅಲ್ಲದೆ ಇದರಲ್ಲಿರುವ ನವಿಲು ಹಾಗೂ ಪಕ್ಷಿಗಳ ವಿನ್ಯಾಸಗಳು ರಾಯಲ್ ಲುಕ್‌ನ ಪ್ರತೀಕವಾಗಿವೆ. ಈ ಸೀರೆಗಳ ಮೇಲಿನ ಜಾಮೆಟ್ರಿಕಲ್ ವಿನ್ಯಾಸಗಳು ಅದೃಷ್ಟವನ್ನು ಸಂಕೇತಿಸುತ್ತವೆ.

ಪೈಠಣಿ ಸೀರೆಯೇ ಅತ್ಯಂತ ರಿಚ್ ಲುಕ್ ನೀಡುವುದರಿಂದ ಇದರ ಜೊತೆಗೆ ಅತಿಯಾದ ಆಭರಣಗಳನ್ನು ಧರಿಸುವ ಅಗತ್ಯವಿಲ್ಲ. ಇದರಿಂದ ಸೀರೆಯ ಸೌಂದರ್ಯ ಕೆಡಬಹುದು.

ಸೀರೆಗೆ ಪೂರಕವಾದ ಲಾಂಗ್ ನೆಕ್ಲೇಸ್, ಶಾರ್ಟ್ ನೆಕ್ಲೇಸ್ ಅಥವಾ ಮುತ್ತಿನ ಹಾರಗಳನ್ನು ಧರಿಸಬಹುದು. ಇವು ಸೀರೆಯ ಜೊತೆಗೆ ಸಖತ್ತಾಗಿ ಕಾಣುತ್ತವೆ. ಈ ಸೀರೆಗಳಿಗೆ ಹೊಂದಿಕೆಯಾಗುವ ಜುಮುಕಿಗಳು, ಮಾಟಿಗಳನ್ನು ಧರಿಸಬಹುದು. ಇಲ್ಲವೇ ಮುತ್ತಿನ ಹಾರದ ಜೊತೆಗೆ ಮುತ್ತಿನ ಕಿವಿಯೋಲೆ, ಮುತ್ತಿನ ಬಳೆಗಳನ್ನು ಧರಿಸಬಹುದು.

ಪೈಠಣಿ ಸೀರೆಯ ಜೊತೆಗೆ ಧರಿಸುವ ರವಿಕೆ ಕೂಡ ಒಂದು ಪ್ರಮುಖ ಪಾತ್ರ ವಹಿಸುತ್ತದೆ. ಈ ಸೀರೆಗೆ ಹೆಚ್ಚಾಗಿ ಸೀರೆಯ ಜೊತೆಗಿರುವ ರವಿಕೆ ಪೀಸ್‌ನಿಂದ ರವಿಕೆ ಹೊಲಿಸಿಕೊಳ್ಳುವುದು ಉತ್ತಮ. ತುಂಬಾ ಸಿಂಪಲ್ಲಾಗಿರಲು ಬಯಸುವವರು ಇದರ ಜೊತೆಗೆ ಪ್ಲೈನ್ ರವಿಕೆ ಹಾಕಿಕೊಳ್ಳಬಹುದು. ಇಲ್ಲವೇ ಇದೀಗ ಮಾರುಕಟ್ಟೆಯಲ್ಲಿ ಸಾಕಷ್ಟು ವೆರೈಟಿ ರೆಡಿಮೇಡ್ ರವಿಕೆಗಳು ದೊರೆಯುತ್ತಿವೆ. ಸೀರೆಗೆ ಮ್ಯಾಚ್ ಆಗುವ ರವಿಕೆ ಆಯ್ಕೆ ಮಾಡಿ ಧರಿಸಬಹುದು. ಈ ರವಿಕೆ ಕೂಡ ತುಂಬಾ ಗ್ರ್ಯಾಂಡ್ ಆಗಿರುವುದನ್ನು ಆಯ್ಕೆ ಮಾಡಿಕೊಳ್ಳಬೇಡಿ. ಕಾರಣ ಈ ತರಹದ ಸೀರೆಗೆ ರವಿಕೆ ಸಿಂಪಲ್ಲಾಗಿದ್ದರೆ ಸೀರೆಗೆ ಲುಕ್ ಹೆಚ್ಚಾಗುತ್ತದೆ.

**ಕೇಶಶೈಲಿ ಹೀಗಿರಲಿ...**

ಸೀರೆಗೆ ತಕ್ಕಂತೆ ಬನ್ ಹೇರ್‌ಸ್ಟೈಲ್ ಮಾಡಿ. ಇದನ್ನು ಹೂವಿನಿಂದ ಅಲಂಕರಿಸಿದರೆ ಚೆನ್ನಾಗಿ ಕಾಣುತ್ತದೆ. ಇಲ್ಲವೇ ಕೂದಲನ್ನು ಪೋನಿಟೇಲ್ ಹಾಕಿ ಹೂಗಳ ಕ್ಲಿಪ್ ಹಾಕಿ ಅಲಂಕರಿಸಿಕೊಳ್ಳಬಹುದು. ■

## ಸೀರೆ ನಿರ್ವಹಣೆಗೆ ಟಿಪ್ಸ್

- ಪೈಠಣಿ ಸೀರೆಗಳು ಚಿನ್ನ ಹಾಗೂ ಬೆಳ್ಳಿಯ ಎಳೆಯ ದಾರಗಳಿಂದ ತಯಾರಿಸಲಾಗಿರುವುದರಿಂದ ಅವುಗಳನ್ನು ಮನೆಯಲ್ಲಿ ವಾಷ್ ಮಾಡುವುದು ಕಷ್ಟ. ಆದ್ದರಿಂದ ಇಂತಹ ಸೀರೆಗಳನ್ನು ಡ್ರೈಕ್ಲೀನಿಂಗ್‌ಗೆ ಕೊಡುವುದು ಸೂಕ್ತ.
- ಮನೆಯಲ್ಲಿಯೇ ಒಗೆಯುವುದಾದರೆ ಜಾಸ್ತಿ ಹೊತ್ತು ನೀರಿನಲ್ಲಿ ನೆನೆಸಿಡಬೇಡಿ. ಒಗೆಯುವಾಗ ಶಾಂಪು ಬಳಸಿ.
- ಸೀರೆಗಳನ್ನು ಶುಚಿಗೊಳಿಸಿದ ನಂತರ ನೇರವಾಗಿ ಬಿಸಿಲಿಗೆ ಒಣಗಿಸದೆ ನೆರಳಲ್ಲಿ ಒಣಗಿಸಿ. ಬಿಸಿಲಿನ ಶಾಖಕ್ಕೆ ರೇಷ್ಮೆ ಬಟ್ಟೆ ಬಣ್ಣ ಕಳೆದುಕೊಳ್ಳುತ್ತದೆ.

